◆ **ನಿಮ್ಮ ಮೊದಲ ಕಥೆ 'ಶೋಧನೆ' ಪ್ರಕಟವಾದದ್ದು 1984ರಲ್ಲಿ, 'ಮಯೂರ'ದಲ್ಲಿ. ಅದೇ ರೀತಿ ನಿಮ್ಮ ಕಥೆಗಳು ಇತ್ತೀಚಿನವರೆಗೂ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೇ ಇವೆ. ಲೇಖಕರೊಬ್ಬರು ಇಷ್ಟು ಸುದೀರ್ಘ ಅವಧಿ– ಮೂರೂವರೆ ದಶಕಗಳ ಕಾಲ– ಒಂದೇ ಪ್ರಕಾರಕ್ಕೆ ಅಂಟಿಕೊಂಡ ನಿದರ್ಶನ ನಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಪರೂಪ. ಕಥೆಗಳೊಂದಿಗೆ ನಿಮ್ಮ ಪಯಣ ಆರಂಭವಾಗಿದ್ದು ಹೇಗೆ?**

ಕಥೆಗಳಿಗಿಂತ ಮೊದಲು ನಾನು ಕವನಗಳನ್ನು ಬರೆದಿದ್ದೆ. ಪದವಿಯಲ್ಲಿದ್ದಾಗಲೇ ಕಾಲೇಜು ಮ್ಯಾಗಜೀನ್‌ಗಳಲ್ಲಿ ನನ್ನ ಒಂದಷ್ಟು ಕವನಗಳು ಪ್ರಕಟವಾಗಿದ್ದವು. ನಾನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. ಓದುತ್ತಿದ್ದಾಗ ವಿಜಾಪುರದಲ್ಲಿ ನಡೆದಿದ್ದ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ನನ್ನ ಕವನ ಸಂಕಲನ 'ನನ್ನ ಕ್ರಾಂತಿಯ ಹುಡುಗಿ' ಬಿಡುಗಡೆಯಾಗಿತ್ತು. ಆದರೆ ನನ್ನ ಅನಿಸಿಕೆಗಳನ್ನು, ಬದುಕಿನ ಸಂಘರ್ಷಗಳನ್ನು ಕಾವ್ಯದಲ್ಲಿ ಸಮರ್ಥವಾಗಿ ಅಭಿವ್ಯಕ್ತಿಸುವುದಕ್ಕೆ ಆಗುತ್ತಿಲ್ಲ ಅನ್ನಿಸಿ ನಾನು ಕಥೆಗಳತ್ತ ಹೊರಳಿದೆ. ಕಥಾ ಬರವಣಿಗೆ ನನಗೆ ಚೆನ್ನಾಗಿ ಮೈಗೂಡಿತು. ಹಳ್ಳಿಗಾಡಿನ ಹಾಗೂ ನಗರಕೇಂದ್ರಿತ ಅನುಭವಗಳನ್ನು, ತುಮುಲಗಳನ್ನು ಕಥೆಗಳ ಚೌಕಟ್ಟಿನಲ್ಲಿ ಚೆನ್ನಾಗಿ ಹಿಡಿದಿಡಬಲ್ಲೆ ಎನ್ನಿಸಿ ಕಾವ್ಯವನ್ನು ಬಿಟ್ಟು ಮೂವತ್ತೈದು ವರ್ಷಗಳಿಂದ ನಿರಂತರವಾಗಿ ಕಥೆಗಳನ್ನು ಬರೆಯುತ್ತಿದ್ದೇನೆ.

◆ **ನಿಮ್ಮ ಸುತ್ತಮುತ್ತ ಸಾಹಿತ್ಯಿಕ ವಾತಾವರಣವಿರಲಿಲ್ಲ. ಪದವಿಯಲ್ಲಾಗಲಿ, ಸ್ನಾತಕೋತ್ತರ ಪದವಿಯಲ್ಲಾಗಲಿ ನೀವು ಸಾಹಿತ್ಯವನ್ನು ಪಠ್ಯವಾಗಿ ಓದಿದವರೂ ಅಲ್ಲ. ಆದರೂ ಸಾಹಿತ್ಯದ ಕಡೆಗೆ ನಿಮ್ಮ ಆಸಕ್ತಿ ಹೊರಳಿದ್ದು, ನೀವು ಕಥೆಗಾರರಾಗಿ ರೂಪುಗೊಂಡಿದ್ದು ಹೇಗೆ?**

ನಮ್ಮ ಮನೆಯಲ್ಲಾಗಲಿ, ಸುತ್ತಮುತ್ತಲಿನ ಊರುಗಳಲ್ಲಾಗಲಿ ಯಾರೂ ಲೇಖಕರು ಇರಲಿಲ್ಲ. ನಮ್ಮ ಹಿರೀಕರು ಬೇಸಾಯಗಾರರು. ನಮ್ಮಪ್ಪ ಅಮ್ಮ ಇಬ್ಬರೂ ಹೆಬ್ಬೆಟ್ಟು ಪಾರ್ಟಿಗಳು. ಆಂಧ್ರ ಮೂಲದ ನಮ್ಮ ಮನೆತನದ ಕಥೆಯನ್ನು ಅವರು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ಆಂಧ್ರದ ಅನಂತಪುರದಲ್ಲಿ ಶೋಷಕ ಬ್ರಿಟಿಷ್ ಕಲೆಕ್ಟರ್‌ನನ್ನು ಖೂನಿ ಮಾಡಿ, ಕರ್ನಾಟಕದ ಗಡಿಯಂಚಿನ ಮಧುಗಿರಿ ಹತ್ತಿರದ ಹಂದ್ರಾಳಕ್ಕೆ ಬಂದು ನೆಲೆನಿಂತ ಮನೆತನ ನಮ್ಮದು. ಇನ್ನು ನಾನು ಯೂನಿವರ್ಸಿಟಿಯಲ್ಲಿ ಓದಿದ್ದು ಎಂ.ಎ. ಅರ್ಥಶಾಸ್ತ್ರ. ಮೊದಲಿನಿಂದಲೂ ನನಗೆ ಇತಿಹಾಸ ನೆಚ್ಚಿನ ಸಬ್ಜೆಕ್ಟ್ ಆಗಿತ್ತು. ಮೇಷ್ಟ್ರು ಸ್ವಾತಂತ್ರ್ಯ ಹೋರಾಟ, ಗಾಂಧಿಯ ಆಂದೋಲನಗಳ ಬಗ್ಗೆ ಹೇಳುವಾಗ ನಾನು ಪರವಶಗೊಳ್ಳುತ್ತಿದ್ದೆ. ಮುಂದೆ ಹೈಸ್ಕೂಲು ಓದಲು ಬೆಂಗಳೂರಿಗೆ ಬಂದೆ. ಇದೊಂದು ನನಗೆ ಹೊಸ ಜಗತ್ತಾಗಿತ್ತು; ಹಳ್ಳಿಯಿಂದ ಬಂದಿದ್ದ ನನಗೆ ಕೀಳರಿಮೆ, ಪರಕೀಯತೆಗಳು ಕಾಡತೊಡಗಿದವು. ಅವುಗಳಿಂದ ಪಾರಾಗಲು ನಾನು ಕಬ್ಬನ್ ಪಾರ್ಕಿನಲ್ಲಿದ್ದ ಸೆಂಟ್ರಲ್ ಪಬ್ಲಿಕ್ ಲೈಬ್ರರಿಗೆ ಹೋಗತೊಡಗಿದೆ. ಅಲ್ಲಿ ಟಿ.ಕೆ. ರಾಮರಾವ್, ಎನ್. ನರಸಿಂಹಯ್ಯ, ಜಿಂದೆ ನಂಜುಂಡಸ್ವಾಮಿ ಮುಂತಾದವರ ಪತ್ತೆದಾರಿ ಕಾದಂಬರಿಗಳು ನನಗೆ ಓದುವ ಗೀಳು ಹತ್ತಿಸಿದವು. ಮುಂದೆ ಪಿ.ಯು.ಸಿ.ಗೆ ಬರುವ ಹೊತ್ತಿಗೆ ನನಗೆ ಎಚ್. ದೇವೀರಪ್ಪನವರ 'ಬೆಳುವಲದ ಮಡಿಲಲ್ಲಿ' ಹಾಗೂ ಬೆಸಗರಹಳ್ಳಿ ರಾಮಣ್ಣನವರ ಕಥೆಗಳು ಪಠ್ಯಗಳಾಗಿದ್ದವು. ಒಕ್ಕಲು ಮಕ್ಕಳ ಬದುಕನ್ನು, ಅವರ ಬದುಕಿನ ಸಂಭ್ರಮ, ಸಂಕಟಗಳನ್ನು ಅವರು ಅಭಿವ್ಯಕ್ತಿಸಿದ್ದ ರೀತಿ ನನಗೆ ಬಹಳವಾಗಿ ಹಿಡಿಸಿತು. ಅವು ನನ್ನದೇ ಬದುಕಿನ ಕಥೆಗಳಂತಿದ್ದವು. ನಾನೂ ಯಾಕೆ ಹೀಗೆ ಬರೆಯಬಾರದು ಎನ್ನಿಸಿತು. ಅದು ನಾನು ಕಥೆಗಾರನಾಗಲು ಪ್ರೇರಣೆಯಾಯಿತು. ಬಾಲ್ಯದ ಹಳ್ಳಿಯ ಬದುಕಿನ ಅನುಭವ ಹಾಗೂ ನಂತರದ ನಗರ ಬದುಕಿನ ಸಾಹಚರ್ಯಗಳು – ಅದರಲ್ಲೂ ಮುಖ್ಯವಾಗಿ ಬೆಂಗಳೂರಿನ ಕಾಟನ್